**ಓ.ಎಸ್. ನಂ. 62/2021** **ಪಿ.ಡಬ್ಲ್ಯೂ- 3**

**<u>ಸಾಕ್ಷಿಯನ್ನು ದಿನಾಂಕ 31.1.2024 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.</u>**

<u>ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಬಿ.ಎಲ್.ಟಿ ವಕೀಲರಿಂದಃ</u>

ವಾದಿಯು ನನಗೆ 20 ವರ್ಷಗಳಿಂದ ಪರಿಚಯವಿರುತ್ತಾರೆ. ಅಂದಾಜು 10 ಜನರು ವಾದಿಗೆ ದಾಖಲಾತಿಯನ್ನು ಬರೆದುಕೊಟ್ಟಿರುತ್ತಾರೆ. ಪ್ರತಿವಾದಿಯರು ದಾವಆಸ್ತಿಯನ್ನು ಕ್ರಯಕ್ಕೆ ಕೊಡುವುದಾಗಿ ಬಂದಿದ್ದರು. ದಾವಆಸ್ತಿಯ ಸರ್ವೆ ನಂಬರ್ ಮತ್ತು ಚಕ್ಕುಬಂದಿ ನನಗೆ ಗೊತ್ತಿರುವುದಿಲ್ಲ. ನನ್ನನ್ನು ಸಾಕ್ಷಿದಾರರಾಗಿ ಸಹಿ ಮಾಡಲು ವಾದಿಯು ಕರೆದುಕೊಂಡು ಹೋಗಿರುತ್ತಾರೆ. ಎಲ್ಲಾ ಪ್ರತಿವಾದಿಯರು ತುಂಬಸೋಗೆ ಗ್ರಾಮದವರಾಗಿರುತ್ತಾರೆ. ಅವರು ನನಗೆ 4 ವರ್ಷಗಳಿಂದ ಪರಿಚಯವಿರುತ್ತಾರೆ. ಕ್ರಯದ ಮಾತುಕತೆಯು ಎಲ್ಲಿ ಆಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿಯರು ನಿಪಿ3 ದಾಖಲೆಯಾದ ದಿನದಿಂದ ಪರಿಚಯವಿರುತ್ತಾರೆ, ಮೊದಲು ಪರಿಚಯವಿರಲಿಲ್ಲ. ಸದರಿ ದಿನ ನನ್ನ ಜೊತೆ ಮುತ್ತಯ್ಯ ಮತ್ತು ಮಹದೇವಪ್ಪ ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ. ಸದರಿ ಮುತ್ತಯ್ಯ ಯಾವ ಊರಿನವರು ಎಂದು ನನಗೆ ಗೊತ್ತಿರುವುದಿಲ್ಲ. ಮಹದೇವಪ್ಪ ತುಂಬಸೋಗೆ ಗ್ರಾಮದವರಾಗಿದ್ದು 10-12 ವರ್ಷಗಳಿಂದ ಪರಿಚಯವಿರುತ್ತಾರೆ. ಅವರು ಹತ್ತಿ ವ್ಯಾಪಾರ ಮಾಡುತ್ತಿದ್ದರು. ನಿಪಿ3 ನ್ನು ಯಾರು ಮಾಹಿತಿ ನೀಡಿ ತಯಾರಿಸಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ನಿಪಿ3 ದಾಖಲೆಯಾದ ದಿನ ನನ್ನ ಸಮಕ್ಷಮ ತಲಾ 1 ಲಕ್ಷದ ಎರಡು ಚೆಕ್‌ಗಳು ಮತ್ತು 2 ಲಕ್ಷವನ್ನು ನಗದು ರೂಪದಲ್ಲಿ ನೀಡಿರುತ್ತಾರೆ. ನಾನು ನಿಪಿ3 ನ್ನು ಹೊರತುಪಡಿಸಿ ಬೇರೆ ಯಾವ ದಾಖಲೆಗೆ ಸಾಕ್ಷಿದಾರನಾಗಿ ಸಹಿ ಮಾಡಿರುವುದಿಲ್ಲ. ವಾದಿ ಮತ್ತು ಪ್ರತಿವಾದಿಯರ ನಡುವೆ ನೋಂದಣಿ ಕಛೇರಿಯಲ್ಲಿ ಬೇರೆ ದಾಖಲಾತಿಯಾಗಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಈಗ ನೋಡುತ್ತಿರುವ ನಿಪಿ2 ರಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ಸಾಕ್ಷಿದಾರರು ಸದರಿ ಸಹಿಯನ್ನು ನೋಡಿ ಒಪ್ಪಿದ್ದರಿಂದ ಅದನ್ನು ನಿಪಿ2 ಎ ಎಂದು ಗುರುತಿಸಲಾಯಿತು. ನಾನು ಮತ್ತು ವಾದಿ ಮೊದಲಿನಿಂದಲೂ ಸ್ನೇಹಿತರಾಗಿರುತ್ತೇವೆ. ವಾದಿ ಮತ್ತು ಪ್ರತಿವಾದಿಯರು ಸದರಿ ದಿನ ಶುಂಠಿ ಬೆಳೆಯುವ ಬಗ್ಗೆ ಕರಾರುಪತ್ರವನ್ನು ಮಾಡಿಕೊಳ್ಳಲು ಸದರಿ ದಿನ ನೋಂದಣಿ ಕಛೇರಿಗೆ ಬಂದಿದ್ದರು ಎಂದರೆ ಸರಿಯಲ್ಲ. ಮೇಲೆ ಹೇಳಿದ ಎರಡು ಚೆಕ್ಕುಗಳು ಎಸ್.ಬಿ.ಐ ಹ್ಯಾಂಡಪೋಸ್ಟ ಶಾಖೆಯ ಚೆಕ್ಕುಗಳಾಗಿದ್ದು, ಯಾರ ಹೆಸರಿಗೆ ಬರೆಯಲಾಗಿತ್ತು ಎಂದು ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿಯರು ಮೂಲತಃ ವ್ಯವಸಾಯಗಾರರು ಎಂದು ನನಗೆ ಗೊತ್ತಿರುವುದಿಲ್ಲ. ಈಗ ನೋಡುತ್ತಿರುವ ನಿಡಿ1 ರಲ್ಲಿರುವ ಸಾಕ್ಷಿದಾರರಾಗಿ ಸಹಿ ಮಾಡಿರುವ 3 ನೇ ಸಹಿ ನನ್ನದಾಗಿರುತ್ತದೆ. ನಿಡಿ1 ರಲ್ಲಿ 25 ಲಕ್ಷ ಎಂದು ಬರೆಯಲಾಗಿರುತ್ತದೆ. ಮಹದೇವಪ್ಪ, ನಾನು ಮತ್ತು ವಾದಿ ಶುಂಠಿ ಬೆಳೆಯುತ್ತಿದ್ದರಿಂದ ನಿಪಿ3 ಮತ್ತು ನಿಡಿ1 ನ್ನು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಯಾವುದೇ

ಕ್ರಯದ ವ್ಯವಹಾರ ಆಗಿರುವುದಿಲ್ಲ, ನಾನು ವಾದಿ ಮತ್ತು ಮಹದೇವಪ್ಪ ಸೇರಿ ದಾಖಲಾತಿಗಳನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ3 ರಂತೆ ಬಾಕಿ ಉಳಿದಿರುವ 3.5 ಲಕ್ಷ ಹಣವನ್ನು ಬೋಗ್ಯಕ್ಕೆ ಸರಿದೂಗಿಸಿಕೊಳ್ಳುವ ಬಗ್ಗೆ ನಮೂದಾಗಿರುತ್ತದೆ. ಪ್ರತಿವಾದಿಯರು ಯಾವುದೇ ಆಸ್ತಿಯನ್ನು ಬೋಗ್ಯಕ್ಕೆ ನೀಡಿರುವುದಿಲ್ಲ, ಎಲ್ಲಾ ದಾಖಲಾತಿಯನ್ನು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಯಾವುದೇ ಕ್ರಯದ ಕರಾರುಪತ್ರ ಆಗಿರುವುದಿಲ್ಲ, ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಓ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.